# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ-679/2017/ಎ.ಆರ್.ಇ-14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 28/06/2022.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ ಶ್ರೀ. **ಹೆಚ್ ಜಯಪ್ರಕಾಶ್,** ಅಂದಿನ ಸಹಾಯಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಹೊನ್ನಾಳಿ, ದಾವಣಗೆರೆ ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಬಿಡಿ/1937/2013/ಡಿ.ಆರ್.ಇ-1 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 27/01/2017.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 23 ಇಎನ್‌ಕ್ಯೂ 2017, ಬೆಂಗಳೂರು, ದಿನಾಂಕ: 06/05/2017.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/679/2017, ಬೆಂಗಳೂರು ದಿನಾಂಕ: 22/05/2017.
4. Order No.UPLOK-2/DE/2017 Bengaluru Dated: 4.7.2017 file transferred from ARE-1 to ARE-7.
5. Order No.UPLOK-1 & 2/DE/Transfers/2018 Bengaluru, Dtd: 06/08/2018 file is transferred from ARE-7 to ARE-14.

* * * * * *

ಮೂರುದಾರರಾದ ಶ್ರೀ. **ರಾಜಕುಮಾರ್ ಕೆ.ಆರ್** ಬಿನ್ ರೇವಣ್ಣ ಸಿದ್ದಪ್ಪ, ತಳವಾರಕೇರಿ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರರಾದ ಶ್ರೀ. **ಹೆಚ್ ಜಯಪ್ರಕಾಶ್,** ಅಂದಿನ ಸಹಾಯಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್

B

ಉಪವಿಭಾಗ, ಹೊನ್ನಾಳಿ, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಸಲ್ಲಿಸಿದ ತಮ್ಮ ದೂರಿನಲ್ಲಿ ಹೊನ್ನಾಳಿ ತಾಲ್ಲೂಕು, ಯಕ್ಕನಹಳ್ಳಿ ಗ್ರಾಮದಲ್ಲಿ ಕೊಳವೆ ನೀರು ಸರಬರಾಜು ಯೋಜನೆಯಡಿ ಕಾಮಗಾರಿಗೆ 2013-14ನೇ ಸಾಲಿನಲ್ಲಿ ಎನ್.ಆರ್.ಡಿ.ಡಬ್ಲ್ಯೂ.ಎಸ್ ಯೋಜನೆಯಡಿಯಲ್ಲಿ ರೂ.19 ಲಕ್ಷಗಳಿಗೆ ಅನುಮೋದನೆಗೊಂಡಿರುತ್ತದೆ. ಅಂದಾಜು ಪಟ್ಟಿಯಲ್ಲಿರುವಂತೆ ಆ.ಸ.ನೌ ರವರು ಕಾಮಗಾರಿಯನ್ನು ಮಾಡದೆ ಕಳಪೆ ಮಟ್ಟದ ಸಾಮಗ್ರಿಗಳನ್ನು ಉಪಯೋಗಿಸಿ ಕಾಮಗಾರಿಗಳನ್ನು ಮಾಡಿರುತ್ತಾರೆ. ಅಷ್ಟೇ ಅಲ್ಲದೇ, ಕಾಮಗಾರಿಯನ್ನು ಸಹ ಸ್ಥಳ ಪರಿಶೀಲಿಸದೆ ಅಂದಾಜು ಪಟ್ಟಿಯಲ್ಲಿರುವಂತೆಯೇ ಬಿಲ್ಲುಗಳನ್ನು ಮಾಡಿರುತ್ತಾರೆ. ಹಣ ದುರುಪಯೋಗ ಪಡಿಸಿಕೊಂಡಿರುತ್ತಾರೆ ಅಂತಾ ದೂರನ್ನು ಸಲ್ಲಿಸಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರ ದಿನಾಂಕ: 06/05/2017ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ವಹಿಸಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 22/05/2017 ರಂದು ಅಪರ ನಿಬಂಧಕರು, ವಿಚಾರಣೆಗಳು-1 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು, ಉಲ್ಲೇಖ (4) ರಂತೆ ಅಪರ ನಿಬಂಧಕರು ವಿಚಾರಣೆಗಳು-1 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು-7 ರವರಿಗೆ ವರ್ಗಾವಣೆಗೊಂಡಿದ್ದು, ಪುನಃ ಉಲ್ಲೇಖ (5) ರಂತೆ ಅಪರ ನಿಬಂಧಕರು ವಿಚಾರಣೆಗಳು-7 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು-14 ರವರಿಗೆ ವರ್ಗಾವಣೆಗೊಂಡಿರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, <u>ಆ.ಸ.ನೌ ರವರ ವಿರುದ್ಧ ದೋಷಾರೋಪಣೆ ***(Articles of Charge)*** ಅನ್ನು ಅಪರ ನಿಬಂಧಕರು, ವಿಚಾರಣೆಗಳು-7 ರವರು ರಚಿಸಿದ್ದು,</u> ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು

ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 11/12/2017 ರಂದು ಕಳುಹಿಸಲಾಗಿರುತ್ತದೆ.

## ಅನುಬಂಧ-1

## ದೋಷಾರೋಪಣೆ

2\. ಅ) ಆ.ಸ.ನೌ.ರರಾದ ನೀವು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಹೊನ್ನಾಳಿ, ದಾವಣಗೆರೆ ಜಿಲ್ಲೆ ಇಲ್ಲಿ ಸಹಾಯಕ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ 1 ಮತ್ತು 2ನೇ ಬಿಲ್‌ಗಳಿಗೆ ಸಂಬಂಧಪಟ್ಟಂತೆ ಅಳತೆ ಪುಸ್ತಕದಲ್ಲಿ ನಮೂದಿಸಿರುವ ಬಿಲ್‌ನ ಕೈಬರಹಗಳು ಬೇರೆ ಬೇರೆಯಾಗಿದ್ದು, ಅಳತೆ ಪುಸ್ತಕದಲ್ಲಿ ಬರೆದಿರುವ ಕೈಬರಹ ಹಾಗೂ ಬಿಲ್‌ನಲ್ಲಿ ಕಂಡುಬರುವ ಕೈಬರಹ ಬೇರೆ ಬೇರೆಯಾಗಿದ್ದು, ಇದು ಇಲಾಖಾ ನಿಯಮಗಳಿಗೆ ವಿರುದ್ಧವಾಗಿದ್ದು ಈ ಬಗ್ಗೆ ಆ.ಸ.ನೌ.ರರಾದ ನೀವು ಯಾವುದೇ ಸಮಜಾಯಿಷಿಯನ್ನು ನೀಡದೇ ಕರ್ತವ್ಯಲೋಪ ಎಸಗಿರುತ್ತೀರಿ.

3\. ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1)(i) ರಿಂದ (iii) ರಡಿಯಲ್ಲಿ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

## ಅನುಬಂಧ-2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

4. ಶ್ರೀ. ರಾಜ್‌ಕುಮಾರ್ ಕೆ.ಆರ್. ಬಿನ್ ರೇವಣ ಸಿದ್ದಪ್ಪ, ತಳವಾರಕೇರಿ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ಹೆಚ್.ಜಯಪ್ರಕಾಶ್, ಅಂದಿನ ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಹೊನ್ನಾಳಿ, ದಾವಣಗೆರೆ ಜಿಲ್ಲೆ ರವರ ವಿರುದ್ಧ ನೀಡಿದ ದೂರಿನನ್ವಯ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಳ್ಳಲಾಗಿತ್ತು.

5. ಪ್ರಕರಣದ ಸಂಕ್ಷಿಪ್ತ ಸಾರಾಂಶ:- ದಾವಣಗೆರೆ ಜಿಲ್ಲೆ, ಹೊನ್ನಾಳಿ ತಾಲ್ಲೂಕು, ಯಕ್ಕನಹಳ್ಳಿ ಗ್ರಾಮದಲ್ಲಿ ಕೊಳವೆ ನೀರು ಸರಬರಾಜು ಯೋಜನೆಯಡಿ ಕಾಮಗಾರಿಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ಇವರ ಮೂಲಕ 2013-14ನೇ ಸಾಲಿನಲ್ಲಿ ಎನ್.ಆರ್.ಡಿ.ಡಬ್ಲ್ಯೂ.ಎಸ್. ಯೋಜನೆಯಡಿಯಲ್ಲಿ ರೂ.19.00 ಲಕ್ಷಗಳಿಗೆ ಅನುಮೋದನೆಗೊಂಡಿದ್ದು, ಅಂದಾಜು ಪಟ್ಟಿಯಲ್ಲಿರುವಂತೆ ಆ.ಸ.ನೌ.ರರು ಕಾಮಗಾರಿಯನ್ನು ಮಾಡದೇ ಕಳಪೆ ಮಟ್ಟದ ಸಾಮಾಗ್ರಿಗಳನ್ನು ಉಪಯೋಗಿಸಿ ಕಾಮಗಾರಿಗಳನ್ನು ಮಾಡಿದ್ದು, ಕಾಮಗಾರಿಯನ್ನು ಸಹ ಸ್ಥಳ ಪರಿಶೀಲಿಸದೇ ಅಂದಾಜು ಪಟ್ಟಿಯಲ್ಲಿರುವಂತೆಯೇ ಬಿಲ್‌ಗಳನ್ನು ಮಾಡಿದ್ದು, ಅಂದಾಜು ಪಟ್ಟಿಯಂತೆ ಕಾಮಗಾರಿಗಳನ್ನು ಮಾಡದೇ ಬಿಲ್‌ನ್ನು ಮಾತ್ರ ಅಂದಾಜು ಪಟ್ಟಿಯಂತೆ ಮಾಡಿ ಕಾಮಗಾರಿಯನ್ನು ಸಹ ಕಳಪೆ ಮಟ್ಟದಲ್ಲಿ ಮಾಡಿ

ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆಂದು ಆಪಾದಿಸಿದ್ದರು.

6. ದೂರಿನ ತನಿಖೆಯನ್ನು ಕೈಗೊಂಡು ವರದಿಯನ್ನು ಸಲ್ಲಿಸುವಂತೆ ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರಿಗೆ ಸೂಚಿಸಿದ್ದು, ಸದರಿಯವರು ಕಾರ್ಯಪಾಲಕ ಅಭಿಯಂತರರು-2, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರಿಗೆ ತನಿಖೆ ಕೈಗೊಂಡು ವರದಿ ಸಲ್ಲಿಸಲು ವಹಿಸಿದಂತೆ ದೂರಿನ ತನಿಖೆ ಕೈಗೊಂಡು ತನಿಖಾ ವರದಿಯನ್ನು ಸಲ್ಲಿಸಿ ಆ.ಸ.ನೌ.ರರು ನೀಡಿರುವ 1 ಮತ್ತು 2ನೇ ಬಿಲ್‌ಗಳಿಗೆ ಸಂಬಂಧಪಟ್ಟಂತೆ ಅಳತೆ ಪುಸ್ತಕದಲ್ಲಿ ನಮೂದಿಸಿರುವ ಬಿಲ್‌ನ ಕೈಬರಹಗಳು ಬೇರೆ ಬೇರೆಯಾಗಿದ್ದು, ಆ.ಸ.ನೌ.ರರು ಬೇರೆಯವರಿಂದ ಬಿಲ್‌ನ್ನು ಬರೆಸಿರುವುದು ಸ್ಪಷ್ಟವಾಗಿ ಕಂಡುಬಂದಿದ್ದು, ಸದರಿಯವರು ಕೈಗೊಂಡಿರುವ ಕ್ರಮವು ಇಲಾಖಾ ನಿಯಮಗಳಿಗೆ ವಿರುದ್ಧವಾಗಿದ್ದು, ಸದರಿಯವರು ಇಲಾಖಾ ನಿಯಮಗಳನ್ನು ಉಲ್ಲಂಘಿಸಿ ಕರ್ತವ್ಯಲೋಪ ಎಸಗಿರುವುದು ಕಂಡುಬರುತ್ತದೆ ಎಂದು ವರದಿಯಲ್ಲಿ ತಿಳಿಸಿದ್ದರು.

7. ತನಿಖಾ ವರದಿಗೆ ಆ.ಸ.ನೌ.ರರಾದ ನೀವು ಆಕ್ಷೇಪಣೆಯನ್ನು ಸಲ್ಲಿಸಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ಹೊನ್ನಾಳಿ ವತಿಯಿಂದ ಕೈಗೊಂಡಿರುವ ದಾವಣಗೆರೆ ಜಿಲ್ಲೆ, ಹೊನ್ನಾಳಿ ತಾಲ್ಲೂಕು, ಯಕ್ಕನಹಳ್ಳಿ ಗ್ರಾಮದಲ್ಲಿ ಕೊಳವೆ ನೀರು ಸರಬರಾಜು ಯೋಜನೆ ಕಾಮಗಾರಿಯ ಮೇಲೆ ಶ್ರೀ.ಕೆ.ಆರ್.ರಾಜ್‌ಕುಮಾರ್, ತಳವಾರಕೇರಿ, ಶಿಕಾರಿಪುರ ಇವರು ಮಾಡಿದ್ದ ದೂರಿನ ಬಗ್ಗೆ ದಿ:29-5-2014 ರಂದು ಗೌರವಾನ್ವಿತ ಉಪಲೋಕಾಯುಕ್ತರು-2, ಬೆಂಗಳೂರು ಇವರು ಜಿಲ್ಲಾಧಿಕಾರಿಗಳ ಕಚೇರಿ, ದಾವಣಗೆರೆ ಇಲ್ಲಿ ದೂರುದಾರರು ಮತ್ತು ಎದುರುದಾರರ ಸಮಕ್ಷಮ ವಿಚಾರಣೆ ಮಾಡಿ ದೂರಿನಲ್ಲಿ

ಯಾವುದೇ ಸತ್ಯಾಂಶವಿಲ್ಲವೆಂದು ಸದರಿ ಕೇಸನ್ನು ವಜಾ ಮಾಡಿದ ಬಗ್ಗೆ ನಮೂದು ಮಾಡಿದ್ದಿರಿ.

8. ದೂರು ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ನೋಟಕ್ಕೆ ಆ.ಸ.ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠತೆಯನ್ನು ತೋರಿಸದೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾದ್ದರಿಂದ ಆ.ಸ.ನೌಕರರಾದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಕ್ರಮ ಜರುಗಿಸಬಹುದಾಗಿದೆ ಎಂದು ಕಂಡುಬಂದಿರುತ್ತದೆ.

9. ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ ಆ.ಸ.ನೌಕರರಾದ ನೀವು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1) (ii) ಮತ್ತು (iii) ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದೀರೆಂದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಆ.ಸ.ನೌಕರರಾದ ನಿಮ್ಮ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗಿತ್ತು. ಸದರಿ ಶಿಫಾರಸಿನ ಮೇರೆಗೆ ಸರ್ಕಾರವು ಆ.ಸ.ನೌಕರರಾದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಂಡು ವರದಿ ಸಲ್ಲಿಸಲು ಗೌರವಾನ್ವಿತ ಉಪಲೋಕಾಯುಕ್ತ–2 ರವರಿಗೆ ವಹಿಸಿ ಆದೇಶ ಮಾಡಿದೆ.ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರು ದಿನಾಂಕ: 16/01/2018 ರಂದು ಹಾಜರಾಗಿದ್ದು, ಆ.ಸ.ನೌ.ರವರ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್ (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು. ಆ.ಸ.ನೌ-1 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ ದೋಷಾರೋಪಣೆಯ ಅನುಬಂಧ-1 ಮತ್ತು 2ರಲ್ಲಿ ಹೇಳಿರುವ ವಿಷಯ ಸತ್ಯಕ್ಕೆ ದೂರವಾಗಿದ್ದು, ಅದರಲ್ಲಿ ಹೇಳಿರುವ ವಿಷಯವನ್ನು ಅಲ್ಲಗಳೆದಿರುತ್ತಾರೆ. ಈಗಾಗಲೇ ದಿನಾಂಕ: 06/02/2014 ರಂದು ಉಪ ನಿಬಂಧಕರು ವಿಚಾರಣೆ-1 ಇವರಿಗೆ ದೂರು ಪ್ರಕರಣ ಸಂಖ್ಯೆ: ಕಂಪ್ಲೇಂಟ್/ಉಪಲೋಕ್/ಬಿಡಿ/3332/2013 ರಲ್ಲಿ ಸದರಿ ವಿವರಣೆಯನ್ನು ಸಲ್ಲಿಸಿರುತ್ತಾರೆ.

7. ದೋಷಾರೋಪಣಾ ಪಟ್ಟಿಯಲ್ಲಿ ಆಪಾದಿಸಿರುವಂತೆ ಅಳತೆ ಪುಸ್ತಕ ಸಂಖ್ಯೆ: 23334 ಪುಟ ನಂ.6ರಲ್ಲಿ ಪಾಯದ ಕೆಲಸ ಮತ್ತು ಪಾಯಕ್ಕೆ 40 ಎಂ.ಎಂ ಜೆಲ್ಲಿ ಕಾಂಕ್ರೀಟ್ ಹಾಕುವ ಕೆಲಸವನ್ನು ನಿರ್ವಹಿಸಿದ್ದು, ಸದರಿ ಅಳತೆಗೆ ದಿನಾಂಕ: 17/12/2012 ರಂದು ಮೇಲಾಧಿಕಾರಿಗಳಾದ ಸಹಾಯಕ ಕಾರ್ಯಪಾಲಕ ಅಭಿಯಂತರರು ಪರಿಶೀಲಿಸಿರುತ್ತಾರೆಂದು ತಿಳಿಸಿರುತ್ತಾರೆ. ಇದೇ ರೀತಿ ಎಲ್ಲಾ ಕಾಮಗಾರಿಯನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿದ್ದು ಸದರಿ ಮಾಹಿತಿಯನ್ನು ಮೇಲಾಧಿಕಾರಿಗಳು ಪರಿಶೀಲಿಸಿರುತ್ತಾರೆ.

8. ಮೊದಲನೇ ಹಂತದ ಬಿಲ್ಲು ಮತ್ತು ಎರಡನೇ ಹಂತದ ಬಿಲ್ಲುಗಳ ಅಳತೆ ಪುಸ್ತಕದಲ್ಲಿರುವ ಕೈಬರಹಗಳು ಆಪಾದಿತ ಸರ್ಕಾರಿ ನೌಕರರದ್ದೇ ಆಗಿದ್ದು, ಮಾರ್ಚ್ ಅಂತ್ಯದ ವೇಳೆಗೆ

ತಯಾರಾದ ಕಾರಣದಿಂದ ಕೆಲಸ ಒತ್ತಡದಿಂದ ಹಾಗೂ ಆರ್ಥಿಕ ವರ್ಷದ ಅಂತ್ಯದೊಳಗೆ ಬಿಲ್ಲುಗಳನ್ನು ಸಲ್ಲಿಸಬೇಕಾದ ಒತ್ತಡದಿಂದ ಇಲ್ಲವಾದಲ್ಲಿ ಅನುದಾನವನ್ನು ಸರ್ಕಾರಕ್ಕೆ ಮರಳಿ ನೀಡಬೇಕಾದ ಕಾರಣದಿಂದ ಬರೆದಿದ್ದ ಕಾರಣ ಬೇರೆ ಬೇರೆ ರೀತಿಯಲ್ಲಿ ಕಂಡು ಬರುತ್ತದೆ ಹೊರತು ಎರಡು ಕೈಬರಹಗಳು ತನ್ನದೇ ಇರುತ್ತದೆ ಎಂದು ಹೇಳಿರುತ್ತಾರೆ. ಆದ್ದರಿಂದ ತಾನು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂತಾ ಹೇಳಿರುತ್ತಾರೆ.

9. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ತಮ್ಮ ಪರವಾಗಿ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.1 ರಿಂದ 7 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳಾದ ಶ್ರೀ. ಟಿ.ಎನ್ ಶಿವರಾಂ ಸಾಮಂತ ರವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.8 ರಿಂದ 10 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ–1 ರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿರುತ್ತಾರೆ.

10. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು. ಆ.ಸ.ನೌ ರವರು ತಮ್ಮ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

11. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

12. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

13. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಸಕಾರಾತ್ಮಕವಾಗಿ.**

**ಅಂಶ 2: ಅಂತಿಮ ಆದೇಶದಂತೆ.**

## <u>ಕಾರಣಗಳು</u>

14. ಶಿಸ್ತು ಪ್ರಾಧಿಕಾರದ ಪರವಾಗಿ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ನುಡಿಸಾಕ್ಷಿ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಿ.ಪಿ.1 ರಿಂದ 3 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ನಿ.ಪಿ.1 ಈ ಸಂಸ್ಥೆಗೆ ನೀಡಿದ ದೂರು; ನಿ.ಪಿ.2 ಫಾರಂ ನಂ.1 ಮತ್ತು ನಿ.ಪಿ.3 ಫಾರಂ ನಂ.2; ನಿ.ಪಿ.4 ಮತ್ತು 5ನ್ನು ಕಾಮಗಾರಿಗೆ ಸಂಬಂಧಪಟ್ಟಂತೆ ಅಳತೆ ಪುಸ್ತಕದ ಬಿಲ್ಲು ನಂ.1 ಮತ್ತು 2; ನಿ.ಪಿ.6 ಅಂದಾಜುಪಟ್ಟಿ ಮತ್ತು ನಿ.ಪಿ.7 ಕಾಮಗಾರಿಯ ನಕಾಶೆಯನ್ನು ಗುರುತಿಸಿಕೊಂಡಿರುತ್ತಾರೆ.

15. ಪಿ.ಡಬ್ಲ್ಯೂ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ತಾನು ಶಿಕಾರಿಪುರದಲ್ಲಿ ಗುತ್ತಿಗೆದಾರರಾಗಿ ಕೆಲಸ ಮಾಡಿಕೊಂಡಿದ್ದು, ಪ್ರಸ್ತುತ ದೂರಿಗೆ ಸಂಬಂಧಿಸಿದಂತೆ ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕು ಎಕ್ಕನಹಳ್ಳಿ ಗ್ರಾಮದಲ್ಲಿ 2013-14ನೇ ಸಾಲಿನಲ್ಲಿ ಕೊಳವೆ ಬಾವಿ ಯೋಜನೆಗೆ ರೂ.19 ಲಕ್ಷ ಅನುಮೋದನೆಗೊಂಡಿದ್ದು, ಅದರ ಅಡಿಯಲ್ಲಿ ಕೈಗೊಂಡ ಕಾಮಗಾರಿಯನ್ನು ಕಳಪೆ ಮಟ್ಟದ ಸಾಮಗ್ರಿಗಳನ್ನು ಉಪಯೋಗಿಸಿ ಮಾಡಿದ್ದು, ಕಾಮಗಾರಿ ಕಳಪೆಯಾಗಿರುತ್ತದೆ ಎಂದು ದೂರನ್ನು ಸಲ್ಲಿಸಿರುತ್ತೇನೆ ಅಂತಾ ನುಡಿದಿರುತ್ತಾರೆ.

16. ಮುಂದುವರೆದು, ಬಿಲ್ ನಂ.1 ಮತ್ತು 2 ರಲ್ಲಿ ಬರೆದಿರುವ ಬರವಣಿಗೆ ಬೇರೆ ಬೇರೆಯಾಗಿರುವುದು ಕಂಡುಬರುತ್ತದೆ ಅಂತಾ ನುಡಿದಿರುತ್ತಾರೆ.

17. ಈ ಪ್ರಕರಣದಲ್ಲಿ ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ ಇವರಿಗೆ ಆದೇಶಿಸಲಾಗಿತ್ತು. ಮುಖ್ಯ ಅಭಿಯಂತರರು ಶ್ರೀ. ಟಿ.ಎನ್ ಶಿವರಾಂ ಸಾಮಂತ, ಕಾರ್ಯಪಾಲಕ ಅಭಿಯಂತರರು-2 ಇವರನ್ನು ತನಿಖಾಧಿಕಾರಿಗಳಾಗಿ ನೇಮಿಸಲಾಗಿತ್ತು. ಅವರು ತನಿಖೆಯನ್ನು ಮಾಡಿ ವರದಿಯನ್ನು ಸಲ್ಲಿಸಿದ್ದು, ಅವರನ್ನು ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ಪಿ.ಡಬ್ಲ್ಯೂ.2 ಎಂದು ಸಾಕ್ಷಿ ಮಾಡಿಸಿರುತ್ತಾರೆ.

18. ಪಿ.ಡಬ್ಲ್ಯೂ.2 (ತನಿಖಾಧಿಕಾರಿಗಳು) ತಮ್ಮ ಮುಖ್ಯ ವಿಚಾರಣೆಯಲ್ಲಿ 2013-14ನೇ ಸಾಲಿನ ಎನ್.ಆರ್.ಡಿ.ಡಬ್ಲ್ಯೂ.ಎಸ್ ಯೋಜನೆಗೆ ಸಂಬಂಧಪಟ್ಟಂತೆ ಕಾಮಗಾರಿಗಳ ಅಂದಾಜುಪಟ್ಟಿ ಮತ್ತು ಅಳತೆ ಪುಸ್ತಕವನ್ನು ಕಳುಹಿಸಿಕೊಡಲು ಇವರ ಹಿಂದಿನ ಅಧಿಕಾರಿಗಳು ಪತ್ರವನ್ನು ಬರೆದು ಸೂಚಿಸಿದ ಮೇರೆಗೆ ಅಳತೆ ಪುಸ್ತಕಗಳನ್ನು ಕಳುಹಿಸಿದ್ದು, 1 ಮತ್ತು 2ನೇ ಬಿಲ್ಲುಗಳಿಗೆ ಸಂಬಂಧಪಟ್ಟಂತೆ ಅಂದರೆ ಅಳತೆ ಪುಸ್ತಕದಲ್ಲಿ ನಮೂದಿಸಿರುವ ಬಿಲ್ಲಿನ ಕೈಬರಹಗಳು ಹಾಗೂ ಬಿಲ್ಲಿನಲ್ಲಿ ಕಂಡುಬರುವ ಕೈಬರಹಗಳು ಬೇರೆ ಬೇರೆಯಾಗಿದ್ದು ಕಂಡುಬಂದಿರುತ್ತದೆ ಎಂದು ನುಡಿದಿರುತ್ತಾರೆ. ಅಳತೆ ಪುಸ್ತಕ ನಂ.23334ನ್ನು ನಿ.ಪಿ.8 ಎಂದು; ಮತ್ತೊಂದು ಅಳತೆ ಪುಸ್ತಕ ನಂ.1335ನ್ನು ನಿ.ಪಿ.9 ಎಂದು ಗುರುತಿಸಿಕೊಂಡಿರುತ್ತಾರೆ.

19. ಮುಂದುವರೆದು, ವರದಿಯನ್ನು ಕಡತದ ಟಿಪ್ಪಣಿ ಹಾಳೆ ಕಂಡಿಕೆ ನಂ.71 ರಿಂದ 110 ರವರೆಗೆ ಬರೆದಿದ್ದು, ಅದನ್ನು ನಿ.ಪಿ.10 ಹಾಗೂ ಸಹಿಗಳನ್ನು ನಿ.ಪಿ.10(ಎ) ಮತ್ತು 10(ಬಿ) ಎಂದು ಗುರುತಿಸಲಾಗಿದ್ದು, ಪ್ರತ್ಯೇಕ ವರದಿ ಇರುವುದಿಲ್ಲ ಎಂದು ನುಡಿದಿರುತ್ತಾರೆ. ಮುಂದುವರೆದು ಅಳತೆ ಪುಸ್ತಕದಲ್ಲಿ ಯಾರು ಕಾಮಗಾರಿಯನ್ನು ನಿರ್ವಹಿಸಿರುತ್ತಾರೆ ಅವರ ಕೈಬರಹದಲ್ಲಿಯೇ ಇರಬೇಕಾಗಿದ್ದು, ಆದರೆ ಈ ಕಾಮಗಾರಿಯ ಅಳತೆ ಪುಸ್ತಕ ನಿ.ಪಿ.8 ರಲ್ಲಿ ಬರೆದ ಕೈಬರಹಕ್ಕೂ ಮತ್ತು ನಿ.ಪಿ.9ರಲ್ಲಿ ಬರೆದ ಕೈಬರಹಕ್ಕೂ ವ್ಯತ್ಯಾಸ ಇರುತ್ತದೆ ಅಂತಾ ನುಡಿದಿರುತ್ತಾರೆ.

20.ಆ.ಸ.ನೌ ರವರು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿದ್ದು, ತಮ್ಮ ಪರವಾಗಿ ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ಪಂಚಾಯತ್ ರಾಜ್, ಜಿಲ್ಲಾ ಪಂಚಾಯತ್, ಹೊನ್ನಾಳಿ ತಾಲ್ಲೂಕು, ದಾವಣಗೆರೆ ರಲ್ಲಿ 2013 ರಿಂದ ಜುಲೈ 2014 ರವರೆಗೆ ಸಹಾಯಕ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಯಕ್ಕನಹಳ್ಳಿ ಗ್ರಾಮದ ಕೊಳವೆ ನೀರು ಸರಬರಾಜು ಯೋಜನೆಯಡಿ ಕಾಮಗಾರಿಗೆ ಸಂಬಂಧಿಸಿದಂತೆ ಅಳತೆ ಪುಸ್ತಕ ಮತ್ತು ಬಿಲ್ಲನ್ನು ತಾನೇ ಬರೆದು ಸಹಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ದೋಷಾರೋಪಣೆಯಲ್ಲಿ ಹೇಳಿದ ಹಾಗೆ ಕೈಬರಹಗಳು ಬೇರೆ ಬೇರೆ ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ.

21. ಪಿ.ಡಬ್ಲ್ಯೂ.2 ರವರು ತಮ್ಮ ಪ್ರತ್ಯೇಕ ವರದಿಯನ್ನು ಸಲ್ಲಿಸಿರುವುದಿಲ್ಲ. ಈ ಪ್ರಕರಣದ ದೂರು ಸಂಖ್ಯೆ: ಕಂಪ್ಲೇಂಟ್/ಉಪಲೋಕ್/ಬಿಡಿ/1937/2013 ರ ಆದೇಶ ಪುಟದಲ್ಲಿ ಖಂಡಿಕೆ 71 ರಿಂದ 110 ರಲ್ಲಿ ನಮೂದಿಸಿರುವ ವಿಷಯವನ್ನು ವರದಿಯೆಂದು ಹೇಳಿರುತ್ತಾರೆ. ಈ ಭಾಗವನ್ನು ನಿ.ಪಿ.10 ಎಂದು ಗುರುತಿಸಿಕೊಂಡಿರುತ್ತಾರೆ. ನಿ.ಪಿ.10ರಲ್ಲಿ ಖಂಡಿಕೆ ನಂ.75ರಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಖಂಡಿಕೆ (20)ರ ಗೌರವಾನ್ವಿತ ಉಪಲೋಕಾಯುಕ್ತರವರ ಒಪ್ಪಿಗೆಯ ಮೇರೆಗೆ, ಈ ಪ್ರಕರಣದಲ್ಲಿ ಬೇರೆ ಇಲಾಖೆಯಿಂದ (ಅಂದರೆ ಆರೋಪ ಮಾಡಿರುವುದು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯವರು ಅನುಷ್ಠಾನಗೊಳಿಸಿದ ಕಾಮಗಾರಿಗೆ ಸಂಬಂಧಪಟ್ಟದ್ದಾದರಿಂದ ದೂರಿನಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಂದ) ತನಿಖೆ ಮಾಡಿಸಿ, ಈ ಸಂಬಂಧ ದಿನಾಂಕ: 27/06/2014 ರಂದು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಂದ ವರದಿಯನ್ನು ಪಡೆಯಲಾಗಿದ್ದು, ಆದ್ದರಿಂದ ಈ ಪ್ರಕರಣದಲ್ಲಿ ಹಾಲಿ ತನಿಖಾಧಿಕಾರಿಗಳು, ಈ ರೀತಿ ಅನ್ಯ ಇಲಾಖೆಯಿಂದ ಪಡೆದ ವರದಿಯನ್ನು ಕೇವಲ ಪರಿಶೀಲಿಸಿ, ಈ ಸಂಬಂಧ ವರದಿಯನ್ನು ಸಲ್ಲಿಸಬೇಕಿದ್ದ ಕಾರಣ, ಕೇವಲ ಸದರಿ ವರದಿಯನ್ನು ಪರಿಶೀಲಿಸಲು ಅವಕಾಶ ನೀಡಬಹುದಾಗಿದೆ ಅಂತಾ ಕೇಳಿಕೊಂಡಿದ್ದು, ಅದಕ್ಕೆ ಮಾನ್ಯರು "Re submit along with report" ಎಂದು ಆದೇಶಿಸಿರುತ್ತಾರೆ.

22.ಮುಂದುವರೆದು ಖಂಡಿಕೆ 80ರ ಪ್ರಕಾರ ಇದೇ ದೂರುದಾರರು ಸಲ್ಲಿಸಿರುವ 10 ದೂರುಗಳ ಪೈಕಿ ದೂರು ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ/1928/2013ಗೆ ಸಂಬಂಧಿಸಿದ ಕಡತದಲ್ಲಿ ಮುಖ್ಯ ಅಭಿಯಂತರರು ದೂರಿನ ತನಿಖೆಯನ್ನು ಕೈಗೊಳ್ಳುವ ವಿಷಯದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರು-2 ರವರ ಆದೇಶವನ್ನು ಕೋರಿದ ಮೇರೆಗೆ ಗೌರವಾನ್ವಿತರು "Referred to the Engineering Department of other office" ಎಂದು ದಿನಾಂಕ: 19/10/2013 ರಂದು ಆದೇಶಿಸಿದ ಹಿನ್ನೆಲೆಯಲ್ಲಿ ಸದರಿ ದೂರು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ ಹೊನ್ನಾಳಿಗೆ ಸಂಬಂಧಿಸಿರುವುದರಿಂದ ಗೌರವಾನ್ವಿತರ ಆದೇಶದಂತೆ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ದಾವಣಗೆರೆ ಇವರಿಗೆ ದಿನಾಂಕ: 21/10/2013 ರಂದು ಅಡಕಗಳೊಂದಿಗೆ ಪತ್ರ ಬರೆದು ದೂರುದಾರರು ಹಾಗೂ ಎದುರುದಾರರೊಂದಿಗೆ ಜಂಟಿಯಾಗಿ ಪರಿವೀಕ್ಷಣೆ ನಡೆಸಿ, ಮಹಜರ್ ಮಾಡಿ ನಡುವಳಿಗಳನ್ನು ದಾಖಲಿಸಿದ ಬಗ್ಗೆ ವಿಡಿಯೋ, ಛಾಯಾಚಿತ್ರಗಳು ಹಾಗೂ ದೃಢೀಕರಿಸಿದ ಇನ್ನಿತರೆ ದಾಖಲಾತಿಗಳನ್ನು 3 ವಾರದೊಳಗೆ ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿತ್ತು ಅಂತಾ ನಮೂದು ಇರುತ್ತದೆ.

23.ಈ ಮಧ್ಯೆ ಖಂಡಿಕೆ ನಂ.81 ರಲ್ಲಿ ನಮೂದಿಸಿದಂತೆ ದೂರುದಾರರು ದಿನಾಂಕ: 04/12/2013 ರಂದು ಈ ಸಂಸ್ಥೆಯ ಮಾನ್ಯ ನಿಬಂಧಕರಿಗೆ ಪತ್ರವನ್ನು ಬರೆದು ಈ ಕೆಳಕಂಡಂತೆ ತಿಳಿಸಿರುತ್ತಾರೆ.

i. ಕಾಮಗಾರಿಗಳನ್ನು ಮಾಡುವ ಮೊದಲೇ ಬಿಲ್ಲನ್ನು ನೀಡಿರುತ್ತಾರೆ ಏಕೆಂದರೆ ಈ ಕಾಮಗಾರಿಯ ಅಗ್ರಿಮೆಂಟ್ ಆಗಿರುವುದು ದಿನಾಂಕ: 12/12/2012 ಹಾಗೂ ಬಿಲ್ಲನ್ನು ಅಳತೆ ಪುಸ್ತಕದಲ್ಲಿ ನಮೂದಿಸಿದ ದಿನಾಂಕ: 15/12/2012 ಹಾಗೂ ಎರಡನೇ ಬಿಲ್ಲನ್ನು ದಿನಾಂಕ: 20/01/2013 ರಂದು ನೀಡಿದ್ದು, 15 ದಿನಗಳ ಅಂತರದಲ್ಲಿ pump house, ಮೋಟಾರ್ ಅಳವಡಿಸುವುದು ಬೋರ್‌ವೆಲ್ ಕೊರೆಯುವುದು ಹಾಗೂ 2750.0 ಮೀ. ಪೈಪ್ ಲೈನ್ ಅಳವಡಿಸುವುದು ಸಾಧ್ಯವೇ

B

ii. ಈ ಕಾಮಗಾರಿಯ ಮೊದಲನೇ ಮತ್ತು ಭಾಗಶಃ ಬಿಲ್ಲು ಹಾಗೂ ಎರಡನೇ ಮತ್ತು ಭಾಗಶಃ ಬಿಲ್ಲುಗಳ ಕೈಬರಹದಲ್ಲಿ ವ್ಯತ್ಯಾಸವು ಕಂಡುಬಂದಿದ್ದು, ಬೇರೆಯವರ ಹತ್ತಿರ ಬಿಲ್ಲುಗಳನ್ನು ಬರೆಸಿರುವುದಾಗಿ ತಿಳಿಸಿ, ಈ ರೀತಿ ಬಿಲ್ಲನ್ನು ಬರೆಸಬಹುದೇ ಎಂದು ಪ್ರಶ್ನಿಸಿರುತ್ತಾರೆ.

24. ಈ ವಿಷಯದ ಬಗ್ಗೆ ಖಂಡಿಕೆ ನಂ.86ರಲ್ಲಿ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ದಾವಣಗೆರೆ ರವರು ತಮ್ಮ ಪತ್ರ ದಿನಾಂಕ: 27/06/2014 ರಲ್ಲಿ ದೂರುದಾರರು ದಿನಾಂಕ: 04/12/2013ರ ತಮ್ಮ ಪತ್ರದಲ್ಲಿ ಮಾಡಿದ ಆಪಾದನೆಗಳಿಗೆ ಈ ಕೆಳಕಂಡಂತೆ ಸ್ಪಷ್ಟೀಕರಣವನ್ನು ಸಲ್ಲಿಸಿರುತ್ತಾರೆ.

i. ಎದುರುದಾರರು 3 ದಿನಗಳಲ್ಲಿ OHT, ಬೋರ್‌ವೆಲ್, ಪೈಪ್‌ಲೈನ್ ಕೆಲಸ ಮಾಡಿರುವುದಾಗಿ ಅಳತೆ ಪುಸ್ತಕದಲ್ಲಿ ನಮೂದಿಸಿರುವುದಾಗಿ ದೂರುದಾರರು ತಿಳಿಸಿ, ಇದು ಸಾಧ್ಯವೇ ಎಂದು ಆಪಾದಿಸಿರುತ್ತಾರೆ. ಆದರೆ ದಿನಾಂಕ: 12/12/2012 ರಿಂದ 15/12/2012 ರವರೆಗೆ ಪಾಯದ ಕೆಲಸ ಹಾಗೂ ಪಾಯಕ್ಕೆ 40 ಎಂ.ಎಂ ಜೆಲ್ಲಿಯ ಕಾಂಕ್ರೀಟ್ ಪದರವನ್ನು ಮಾತ್ರ ಅಳವಡಿಸಲಾಗಿದೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಹೊನ್ನಾಳಿ ರವರು ನೀಡಿರುವ ಹೇಳಿಕೆಯು ಸರಿಯಾಗಿರುವುದಾಗಿ ಸ್ಪಷ್ಟೀಕರಣ ನೀಡಿರುತ್ತಾರೆ.

ii. ದೂರುದಾರರು ತಮ್ಮ ಪತ್ರದಲ್ಲಿ ಎರಡನೇ ಬಿಲ್ಲನ್ನು ದಿನಾಂಕ: 20/01/2013 ರಂದು ನೀಡಿರುವುದಾಗಿ ತಿಳಿಸಿ ಅಗ್ರಿಮೆಂಟ್ ಆಗಿ 15 ರಿಂದ20 ದಿನದೊಳಗಾಇ ಪಂಪ್‌ಹೌಸ್, ಮೋಟಾರ್ ಕೂಡಿಸುವುದು, ಬೋರ್‌ವೆಲ್ ಹಾಗೂ 2705.0 ಮೀ. ಪೈಪ್‌ಲೈನ್‌ನ್ನು ಅಳವಡಿಸಿರುವುದು ಸಾಧ್ಯವೇ ಎಂದು ಆಪಾದಿಸಿರುತ್ತಾರೆ. ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ದಾವಣಗೆರೆ ರವರು ಈ ಕಾಮಗಾರಿಗಳನ್ನು 35

ದಿವಸಗಳಲ್ಲಿ ನಿರ್ವಹಿಸಿರುತ್ತಾರೆ. ಸದರಿ ಕಾಮಗಾರಿಯನ್ನು 35 ದಿವಸಗಳಲ್ಲಿ ನಿರ್ವಹಿಸಬಹುದಾಗಿರುವುದರಿಂದ ದೂರುದಾರರು ಮಾಡಿರುವ ಆಪಾದನೆಯು ಸತ್ಯಕ್ಕೆ ದೂರವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

iii. ದೂರುದಾರರು ದಿನಾಂಕ: 04/12/2013ರ ತಮ್ಮ ಪತ್ರದಲ್ಲಿ ಮೊದಲನೇ ಮತ್ತು ಎರಡನೇ ಬಿಲ್ಲಿನಲ್ಲಿ ಕೈಬರಹಗಳು ಬೇರೆ ಬೇರೆ ಇರುತ್ತದೆ ಎಂದು ತಿಳಿಸಿ, ನಿಯಮಾವಳಿಯಂತೆ ಈ ರೀತಿ ಬೇರೆಯವರ ಹತ್ತಿರ ಬಿಲ್ಲನ್ನು ಅಳತೆ ಪುಸ್ತಕದಲ್ಲಿ ಬರೆಸಬಹುದೇ ಎಂದು ಆಪಾದಿಸಿರುವ ಹಿನ್ನೆಲೆಯಲ್ಲಿ ದೂರುದಾರರು ನೀಡಿರುವ ಮಾಹಿತಿಯು ಸರಿಯಾಗಿರುತ್ತದೆ ಹಾಗೂ ನಿಯಮಾವಳಿಯಂತೆ ಈ ರೀತಿ ಬೇರೆಯವರಿಂದ ಬಿಲ್ಲನ್ನು ಬರೆಸುವಂತಿಲ್ಲ. ಎ ಕೋಡ್ ಹಾಗೂ ಡಿ ಕೋಡ್‌ನಂತೆ ಅಳತೆ ಪುಸ್ತಕದಲ್ಲಿ ಶಾಖಾಧಿಕಾರಿಗಳೇ ಬಿಲ್ಲನ್ನು ಬರೆಯುವುದು ಕ್ರಮವಾಗಿರುತ್ತದೆ ಎಂದು ತಿಳಿಸಿರುತ್ತಾರೆ.

25. ಖಂಡಿಕೆ ನಂ.87 ರಲ್ಲಿ ಎದುರುದಾರರಾದ ಶ್ರೀ. ಹೆಚ್ ಜಯಪ್ರಕಾಶ್, ಸಹಾಯಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಹೊನ್ನಾಳಿ ಇವರು ನೀಡಿರುವ 1 ಮತ್ತು 2ನೇ ಬಿಲ್ಲಿಗೆ ಸಂಬಂಧಪಟ್ಟಂತೆ ಅಳತೆ ಪುಸ್ತಕದಲ್ಲಿ ನಮೂದಿಸಿರುವ ಬಿಲ್ಲಿನ ಕೈಬರಹಗಳು ಬೇರೆ ಬೇರೆಯಾಗಿದ್ದು, ಸದರಿಯವರ ಬೇರೆಯವರಿಂದ ಬಿಲ್ಲನ್ನು ಬರೆಸಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಸದರಿಯವರು ಕೈಗೊಂಡಿರುವ ಈ ಕ್ರಮವು ಇಲಾಖಾ ನಿಯಮಗಳಿಗೆ ವಿರುದ್ಧವಾಗಿದ್ದು, ಸದರಿಯವರು ಇಲಾಖಾ ನಿಯಮಗಳನ್ನು ಉಲ್ಲಂಘಿಸಿ ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿರುತ್ತದೆ ಅಂತಾ ನಮೂದು ಇರುತ್ತದೆ.

26. ನಂತರ ಖಂಡಿಕೆ 103ರ ಪ್ರಕಾರ ದೂರುದಾರರು ದಿನಾಂಕ: 04/12/2013 ರಂದು ಸಲ್ಲಿಸಿದ ಪತ್ರಕ್ಕೆ ಸಂಬಂಧಪಟ್ಟಂತೆ, ತನಿಖಾಧಿಕಾರಿಗಳಿಂದ ವರದಿ/ವಿವರಣೆಯನ್ನು ಸಲ್ಲಿಸಲು ಸೂಚಿಸಿದ್ದು ಇರುತ್ತದೆ. ನಂತರ ತನಿಖಾಧಿಕಾರಿಗಳು ಖಂಡಿಕೆ ನಂ.109 ಮತ್ತು 110 ರಲ್ಲಿ ಈ ಮುಂದೆ ಹೇಳಿದಂತೆ ನಮೂದಿಸಿರುತ್ತಾರೆ.

&

**109)** ಮೇಲಿನ ವಿವರಗಳನ್ನು ಪರಿಶೀಲಿಸಲಾಗಿ, ಸದರಿ ಕಾಮಗಾರಿಯು ದಿನಾಂಕ: 12/12/2012 ರಂದು ಪ್ರಾರಂಭವಾಗಿದ್ದು ಹಾಗೂ ಒಟ್ಟಾರೆಯಾಗಿ ಕಾಮಗಾರಿಯು ದಿನಾಂಕ: 22/08/2013 ರಂದು ಪೂರ್ಣಗೊಂಡಿರುವುದು ಅಳತೆ ಪುಸ್ತಕದಲ್ಲಿ ನಮೂದಿಸಿರುವ ದಿನಾಂಕಗಳಿಂದ ತಿಳಿದುಬಂದಿರುತ್ತದೆ.

**110)** ದೂರುದಾರರು ದಿನಾಂಕ: 04/12/2013ರ ತಮ್ಮ ಪತ್ರದಲ್ಲಿ ತಿಳಿಸಿರುವಂತೆ, 3 ದಿವಸಗಳಲ್ಲಿ OHT, Borewell, Pipeline ಗಳ ಬಿಲ್ಲನ್ನು ಬರೆದಿರುತ್ತಾರೆ ಎಂಬುದು ಕಂಡುಬರುವುದಿಲ್ಲ ಹಾಗೂ ಪಂಪ್‌ಹೌಸ್, ಮೋಟರ್ ಅಳವಡಿಸುವುದು ಬೋರ್‌ವೆಲ್ ಕಾಮಗಾರಿ ಮತ್ತು ಪೈಪ್‌ಲೈನ್ ಅಳವಡಿಸಿರುವ ಕಾಮಗಾರಿಯ ಬಿಲ್ಲನ್ನು ದಿನಾಂಕ: 20/01/2013 ರಂದು ಅಂದರೆ 40 ದಿವಸಗಳ ಅಂತರದಲ್ಲಿ ಬಿಲ್ಲುಗಳನ್ನು ಬರೆದಿರುವುದು ದಾಖಲೆಗಳಿಂದ ತಿಳಿದುಬಂದಿರುತ್ತದೆ. ದೂರುದಾರರು ತಮ್ಮ ಪತ್ರದಲ್ಲಿ ತಿಳಿಸಿರುವಂತೆ 15 ದಿವಸಗಳಲ್ಲಿ ಬಿಲ್ಲನ್ನು ಬರೆದಿರುತ್ತಾರೆ ಎಂಬುದು ಕಂಡುಬಂದಿರುವುದಿಲ್ಲ.

ಆದ್ದರಿಂದ ದೋಷಾರೋಪಣೆಯಲ್ಲಿ ನಮೂದಿಸಿದ ಆರೋಪವನ್ನು ಸಿದ್ಧಪಡಿಸಲಾಗಿರುತ್ತದೆ.

27.ಪಿ.ಡಬ್ಲ್ಯೂ.2 ಇವರ ಪಾಟಿಸವಾಲಿನಲ್ಲಿ "ತಮ್ಮ ವರದಿಯನ್ನು ಸಲ್ಲಿಸುವ ಮೊದಲು ಆ.ಸ.ನೌ ರವರ ಕಡೆಯಿಂದ ಅವರ ಸ್ವಹಸ್ತಾಕ್ಷರದಲ್ಲಿ ಬರೆದಂತಹ ಬರೆವಣಿಗೆಯನ್ನು ಪಡೆದುಕೊಂಡಿರುವುದಿಲ್ಲ. ನಿ.ಪಿ.8 ಮತ್ತು 9ರಲ್ಲಿ ಬರೆದಂತಹ ಕೈಬರಹಗಳು ಆ.ಸ.ನೌ ರವರ ಮೇಲಾಧಿಕಾರಿಗಳಿಗೆ ಕಳುಹಿಸಿ ಇದ್ದ ಹಸ್ತಾಕ್ಷರಗಳು ಯಾರದ್ದು ಇರುತ್ತಾವೆ ಅಂತಾ ಕೇಳಿಕೊಂಡಿರುವುದಿಲ್ಲ. ನಿ.ಪಿ.8 ಮತ್ತು 9 ಇವರುಗಳ ಜೊತೆಗೆ ಆ.ಸ.ನೌ ರವರ ಸ್ವಹಸ್ತಾಕ್ಷರದಲ್ಲಿ ಬರೆದ ಮಾದರಿಯನ್ನು ನೀವೇನಾದರೂ ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿರುತ್ತೀರಾ ಎಂದು ಮಾಡಿದ ಸಲಹೆಗೆ ಸಾಕ್ಷಿ ಇಲ್ಲವೆಂದು ನುಡಿದಿರುತ್ತಾರೆ.

28.ಆ.ಸ.ನೌ ರವರು ತಮ್ಮ ಲಿಖಿತ ವಾದ ಮಂಡಿಸಿದ್ದು, ತಮ್ಮ ಲಿಖಿತವಾದದಲ್ಲಿ ಹಾಗೂ ರಕ್ಷಣಾ ಹೇಳಿಕೆಯಲ್ಲಿ ಮೊದಲನೇ ಹಂತದ ಬಿಲ್ಲು ಮತ್ತು ಎರಡನೇ ಹಂತದ ಬಿಲ್ಲುಗಳ ಅಳತೆ ಪುಸ್ತಕದಲ್ಲಿರುವ ಕೈಬರಹಗಳು ಆಪಾದಿತ ಸರ್ಕಾರಿ ನೌಕರರದ್ದೇ ಆಗಿದ್ದು, ಮಾರ್ಚ್ ಅಂತ್ಯದ ವೇಳೆಗೆ ತಯಾರಾದ ಕಾರಣದಿಂದ ಕೆಲಸ ಒತ್ತಡದಿಂದ ಹಾಗೂ ಆರ್ಥಿಕ ವರ್ಷದ ಅಂತ್ಯದೊಳಗೆ ಬಿಲ್ಲುಗಳನ್ನು ಸಲ್ಲಿಸಬೇಕಾದ ಒತ್ತಡದಿಂದ ಇಲ್ಲವಾದಲ್ಲಿ ಅನುದಾನವನ್ನು ಸರ್ಕಾರಕ್ಕೆ ಮರಳಿ ನೀಡಬೇಕಾದ ಕಾರಣದಿಂದ ಬರೆದಿದ್ದ ಕಾರಣ ಬೇರೆ ಬೇರೆ ರೀತಿಯಲ್ಲಿ ಕಂಡು ಬರುತ್ತದೆ ಹೊರತು ಎರಡು ಕೈಬರಹಗಳು ತನ್ನದೇ ಇರುತ್ತದೆ ಎಂದು ಹೇಳಿರುತ್ತಾರೆ. ಆದ್ದರಿಂದ ತಾನು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂತಾ ಹೇಳಿರುತ್ತಾರೆ.

29.ನಿ.ಪಿ.8 ಇದು ಅಳತೆ ಪುಸ್ತಕ ಇದ್ದು, ಪುಟ ನಂ.86 ರಿಂದ 96 ಪುಟಗಳು ಇದ್ದು, ಪುಟ ನಂ.86 ರಲ್ಲಿ Date of recording 15/12/2012 ರಂದು ಬರೆದಿದ್ದು, ಪುಟ ನಂ.96 ರಲ್ಲಿ ದಿನಾಂಕ: 26/03/2013 ಇರುತ್ತದೆ. ನಿ.ಪಿ.9 ಇದು ಸಹ ಅಳತೆ ಪುಸ್ತಕ ಇದ್ದು, ಪುಟ ನಂ.36 ರಿಂದ 48 ಹಾಗೂ ಪುಟ ನಂ.82 ರಿಂದ 101 ರವರೆಗೆ ಇರುತ್ತದೆ. ನಿ.ಪಿ.8 ರಲ್ಲಿ ಆರ್.ಎ ಬಿಲ್ ನಂ.1st, ನಿ.ಪಿ.9 ಪುಟ ನಂ.36 ರಲ್ಲಿ R.A Bill No.II & Part. ಅದರಂತೆ ಪುಟ ನಂ.82 ರಲ್ಲಿ R.A Bill No.3rd & final bill ಅಂತಾ ನಮೂದು ಇರುತ್ತದೆ. ನಿ.ಪಿ.9 ರಲ್ಲಿ ಪುಟ ನಂ.36 ರಲ್ಲಿ Date of recording 20/01/2012 ಅಂತಾ ಬರೆದಿದ್ದು, ಪುಟ ನಂ.48 ರಲ್ಲಿ B/R 18/06/2013 ಅಂತಾ ಇರುತ್ತದೆ. ಪುಟ ನಂ.82 ರಲ್ಲಿ Date of recording 22/08/2013 ಅಂತಾ ಬರೆದಿದ್ದು, ಪುಟ ನಂ.101 ರಲ್ಲಿ B/R 17/09/2013 ಅಂತಾ ನಮೂದು ಇರುತ್ತದೆ.

30.ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಆ.ಸ.ನೌ ರವರು ಹೇಳಿದ ಹಾಗೆ ಮಾರ್ಚ್ ತಿಂಗಳ ಅಂತ್ಯದ ವೇಳೆಗೆ ತಯಾರಾದ ಕಾರಣ, ಕೈಬರಹಗಳು ಬೇರೆ ಬೇರೆ ರೀತಿಯಲ್ಲಿ ಕಂಡುಬರುತ್ತದೆ ಅಂತಾ ಒಪ್ಪಲು ಸಾಧ್ಯವಿರುವುದಿಲ್ಲ. ಅಲ್ಲದೇ, ಅಳತೆ ಪುಸ್ತಕದಲ್ಲಿ ಕಾಮಗಾರಿಯನ್ನು ಕೈಗೊಂಡ

ದಿನದಿಂದ ಪ್ರಾರಂಭಿಸಿ ಮುಕ್ತಾಯವಾಗುವವರೆಗೆ ದಿನನಿತ್ಯ ಬರೆಯಬೇಕಾಗುತ್ತದೆ. ಆದರೆ ಒಂದೇ ದಿನ ಎಲ್ಲಾ ಕಾಮಗಾರಿಯು ಮುಗಿದ ನಂತರ ಬರೆಯುವ ಹಾಗೆ ಇಲ್ಲ. ಆದ್ದರಿಂದ, ಆ.ಸ.ನೌ ರವರು ಮೇಲೆ ಹೇಳಿದ ವಿಷಯವು ಒಪ್ಪಲು ಸಾಧ್ಯವಿರುವುದಿಲ್ಲ.

31. ಮೇಲಾಗಿ ಡಿ.ಡಬ್ಲ್ಯೂ.1 (ಆ.ಸ.ನೌ) ಇವರು ತಮ್ಮ ಪಾಟಿಸವಾಲಿನಲ್ಲಿ ಪುಟ ನಂ.3ರಲ್ಲಿ "ಅಳತೆ ಪುಸ್ತಕ ಮತ್ತು ಬಿಲ್ಲಿನಲ್ಲಿ ನನ್ನ ಕೈಬರಹದಲ್ಲಿ ಇರುವುದಿಲ್ಲ, ನಾನು ಬೇರೆಯವರ ಕಡೆಯಿಂದ ಬರೆಸಿರುತ್ತೇನೆ ಎಂದರೆ ಸರಿ" ಅಂತಾ ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ಪಿ.ಡಬ್ಲ್ಯೂ.1 ಇವರು ತಮ್ಮ ಪಾಟಿಸವಾಲಿನಲ್ಲಿ ನಿ.ಪಿ.8 ಮತ್ತು 9 ಆ.ಸ.ನೌ ರವರೇ ಬರೆದಿರುತ್ತಾರೆ ಅಂತಾ ಒಪ್ಪಿಕೊಂಡಿದ್ದರು ಸಹ ಆ.ಸ.ನೌ ರವರೇ ತಮ್ಮ ಪಾಟಿಸವಾಲಿನಲ್ಲಿ ಮೇಲೆ ಹೇಳಿದ ಹಾಗೆ ಬೇರೆಯವರ ಕೈಯಿಂದ ಬರೆಸಿರುತ್ತೇನೆ ಅಂತಾ ನುಡಿದಿದ್ದರಿಂದ, ಕಾರಣ ನಿ.ಪಿ.8 ರಲ್ಲಿ ಬರೆದ ಕೈಬರಹ ಹಾಗೂ ನಿ.ಪಿ.9 ರಲ್ಲಿ ಬರೆದ ಕೈಬರಹ ಬೇರೆ ಬೇರೆಯಾಗಿರುತ್ತದೆ ಅಂತಾ ಕಂಡು ಬಂದಿದ್ದು, ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ಈ ಆರೋಪವನ್ನು ರುಜುವಾತುಪಡಿಸಿರುತ್ತಾರೆ.

32. ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ಸಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ–1ನ್ನು ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

33. **ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

## ನಿರ್ಣಯ

ಆ.ಸ.ನೌಕರ ಶ್ರೀ. **ಹೆಚ್ ಜಯಪ್ರಕಾಶ್,** ಅಂದಿನ ಸಹಾಯಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಹೊನ್ನಾಳಿ, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಆಪಾದಿಸಲಾದ

ಆರೋಪಗಳನ್ನು ಅಂದರೆ ಅಳತೆ ಪುಸ್ತಕ ಸಂಖ್ಯೆ: 23334 ಮತ್ತು 1335 ಈ ಎರಡೂ ಅಳತೆ ಪುಸ್ತಕದಲ್ಲಿ ಬರೆದ ಕೈಬರಹಗಳು ಬೇರೆ ಬೇರೆ ಆಗಿರುತ್ತದೆ ಅಲ್ಲದೇ ಆ.ಸ.ನೌ ರವರು ಬೇರೆಯವರಿಂದ ಬರೆಸಿರುತ್ತಾರೆ ಅಂತಾ ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ಸಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

**ಆ.ಸ.ನೌ ರವರ ನಿವೃತ್ತಿ ದಿನಾಂಕ: 31/07/2024 ಆಗಿರುತ್ತದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

28/6.

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. Rajkumar K.R S/o K Revanasiddappa, Shikaripura, Shimoga. |
| | **PW-2** | Sri. Shivaram Samanth T.N S/o Nagabhushan Rao, Rtd. EE, Kodigehalli, Bengaluru. |
| 2 | **Documents marked on behalf of the Disciplinary Authority Ex.P-1 to Ex.P-10** | |
| | **Ex.P.1 & 1(a)** | Complaint dtd: 03/08/2013 given to this institution with signature. |
| | **Ex.P.2** | Form No.1. |
| | **Ex.P.3** | Form No.2 (Affidavit). |
| | **Ex.P.4** | M.B Book. |
| | **Ex.P.5** | M.B Book. |
| | **Ex.P.6** | Estimation. |
| | **Ex.P.7** | Sketch map. |
| | **Ex.P.8** | Copy of M.B Book No.23334. |
| | **Ex.P.9** | Copy of M.B Book No.1335. |
| | **Ex.P.10, 10(a) & 10(b)** | Investigation report in note sheet with signatures |

| | | |
|---|---|---|
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. Jayaprakash H S/o S Halappa, PWD Sub-Division, Honnali. |

Dated this the 28th June, 2022

Paradeshi 28/6.

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.

KARNATAKA LOKAYUKTA

No.UPLOK-2/DE.679/2017/ARE-14

Multi Storied Building,
Dr. B.R. Ambedkar Veedhi,
Bengaluru-560 001.
Dated 01.07.2022.

## RECOMMENDATION

Sub:- Departmental inquiry against Sri H.Jayaprakash, the then Asst. Engineer, PRE Sub-division, Honnali, Davanagere District- reg.

Ref:- Government Order No. RDP 23 ENQ 2017 dated 06.05.2017.

2) Nomination order No. UPLOK-2/DE.679/2017 dated 22.05.2017 of Hon'ble Upalokayukta, State of Karnataka.

3) Inquiry report dated 28.06.2022 of Additional Registrar of Enquiries-14, Karnataka Lokayukta, Bengaluru.

~~~~~~

The Government by its orders dated 06.05.2017 initiated the disciplinary proceedings against Sri H.Jayaprakash, the then Asst. Engineer, PRE Sub-division, Honnali, Davanagere District, [hereinafter referred to as Delinquent Government Official, for short as ' DGO ' ] and entrusted the Departmental Inquiry to this Institution.
~~~~~~

2. This Institution by Nomination Order No. UPLOK-2/DE.679/2017 dated 22.05.2017 nominated Additional Registrar of Enquiries-1, Karnataka Lokayukta, Bengaluru, as the Inquiry Officer to frame charges and to conduct departmental inquiry against DGO for the alleged charge of misconduct, said to have been committed by him. Subsequently, the matter was transferred to ARE-7 and then to Additional Registrar of Enquiries-14 to continue the said inquiry.

3. The DGO was tried for the charge of getting the measurement book and the bills written in different hand writings in violation of departmental rules and thereby committing misconduct.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the Disciplinary Authority has '*proved*' the above charge against the DGO Sri H.Jayaprakash, the then Asst. Engineer, PRE Sub-division, Honnali, Davanagere District.

5. On re-consideration of report of inquiry and on perusal of the entire records, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer.

6. As per the First Oral Statement of the DGO, DGO Sri H.Jayaprakash is due to retire from service on 31.07.2024.

7. Having regard to the nature of charge proved against the DGO and considering the totality of circumstances, it is hereby recommended to the Govt. to impose penalty of 'withholding two annual increments payable to DGO Sri H.Jayaprakash, with cumulative effect.'

8. Action taken in the matter shall be intimated to this Authority.

Connected records are enclosed herewith.

01/07/22

(JUSTICE K.N.PHANEENDRA)
Upalokayukta,
State of Karnataka.